**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ,**
**ಮೂಡಿಗೆರೆ**
**ಸಿ.ಸಿ.1735/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮಂಜುನಾಥ್ ಬಿ.ಎಸ್ | ಪ್ರಾಸಾ-6 |
| ತಂದೆಯ ಹೆಸರು | : ಸಿದ್ದಯ್ಯ | ಚಾಸಾ-6 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಹೆಚ್.ಸಿ-21 | ದಿನಾಂಕಃ 21.01.2026. |
| ವಾಸಸ್ಥಳ | : ಬಣಕಲ್ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು 30.08.2021 ರಿಂದ ದಿ.15.08.2023 ರವರೆಗೂ ಬಾಳೂರು ಪೋಲಿಸ್ ಠಾಣೆಯಲ್ಲಿ ಸಿ.ಪಿ.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.10.07.2023 ರಂದು ರಾ.12.00 ರ ಸಮಯದಲ್ಲಿ ಗಸ್ತು ಕಾರ್ಯಾಚಾರಣೆಯಲ್ಲಿ ಇರುವಾಗ ಚಾಸಾ-1 ರವರು ಕರೆ ಮಾಡಿ ಠಾಣೆಗೆ ಹಾಜರಾಗುವಂತೆ ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ-8 ರವರು ಠಾಣೆಗೆ ಹಾಜರಾಗಿರುತ್ತೇವೆ. ನಂತರ ಚಾಸಾ-1 ರವರು ಜಾವಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಯಾರೋ ವ್ಯಕ್ತಿಗಳು ವಾಹವನ್ನು ನಿಲ್ಲಿಸಿಕೊಂಡು ಅಕ್ರಮವಾಗಿ ಗೋವುಗಳನ್ನು ಕಳ್ಳತನ ಮಾಡಿ ವಾಹನಕ್ಕೆ ತುಂಬುತ್ತಿರುವುದಾಗಿ ಮಾಹಿತಿ ಬಂದಿರುವುದನ್ನು ತಿಳಿಸಿರುತ್ತಾರೆ. ಅದರಂತೆ ನಾನು ಮತ್ತು ಚಾಸಾ-8 ರವರು ಇಲಾಖಾ ಜೀಪಾದ KA-18-G-755 ವಾಹನದಲ್ಲಿ, ಚಾಲಕನಾದ ಚಾಸಾ-7 ಮತ್ತು ಚಾಸಾ-1 ರವರೊಟ್ಟಿಗೆ ರಾ.12.10 ರ ಸಮಯಕ್ಕೆ ಠಾಣೆಯಿಂದ ಹೊರಟು ಜಾವಳಿ ಗ್ರಾಮದ ರಸ್ತೆಯ ಬಳಿ ಬಂದು ನೋಡಲಾಗಿ ಇಬ್ಬರು ವ್ಯಕ್ತಿಗಳು ನಡೆದುಕೊಂಡು ಹೋಗುತ್ತಿದ್ದು ಸದರಿ ವ್ಯಕ್ತಿಗಳಿಗೆ ಚಾಸಾ-1 ರವರು ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಿ ಪಂಚರಾಗಿ ಹಾಜರಾಗುವಂತೆ ಕೋರಿಕೊಂಡ ಮೇರೆಗೆ ಅವರಿಗೆ ನೋಟೀಸನ್ನು ಜಾರಿ ಮಾಡಿ ಸದರಿ ವ್ಯಕ್ತಿಗಳನ್ನು ನಮ್ಮೊಟ್ಟಿಗೆ ಇಲಾಖೆ ಜೀಪ್ ನಲ್ಲಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಸ್ಥಳಕ್ಕೆ ಹೋಗಿ ನೋಡಲಾಗಿ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಹಸುಗಳನ್ನು ಅಕ್ರಮವಾಗಿ ತುಂಬುತಿದ್ದ ವ್ಯಕ್ತಿಗಳು ಓಡಲು ಪ್ರಯತ್ನಿಸಿರುತ್ತಾರೆ.

ನಂತರ ಅವರುಗಳಲ್ಲಿ ಒಬ್ಬ ವ್ಯಕ್ತಿಯನ್ನು ಹಿಡಿದು ಚಾಸಾ-1 ರವರ ಬಳಿ ಹಾಜರುಪಡಿಸಿ ಅವರನ್ನು ವಿಚಾರಿಸಲಾಗಿ ಅವರ ಹೆಸರು ಚಂದ್ರೇಗೌಡ ಬಿನ್ ಮಂಜೇಗೌಡ, ತಿಮ್ಮೇನಹಳ್ಳಿ ಗ್ರಾಮದ ಹಾಲುರು ತಾಲ್ಲೂಕು ವಾಸಿ ಎಂದು ತಿಳಿದು ಬಂದಿರುತ್ತದೆ. ನಂತರ ನನ್ನೊಟ್ಟಿಗಿದ್ದ ಚಾಸಾ-8 ಮತ್ತು 7 ರವರು ಇನ್ನು ಇಬ್ಬರು ವ್ಯಕ್ತಿಗಳನ್ನು ಹಿಡಿದು ತಂದು ಹಾಜರುಪಡಿಸಿ ಅವರನ್ನು ವಿಚಾರಿಸಲಾಗಿ ಅದರಲ್ಲಿ ಒಬ್ಬ ವ್ಯಕ್ತಿಯ ಹೆಸರು ಮಂಜೇಗೌಡ ಬಿನ್ ಮಂಜೇಗೌಡ, ತಿಮ್ಮನಹಳ್ಳಿಯ ವಾಸಿ ಮತ್ತು ಚಂದ್ರಶೇಖರ್, ಆಲೂರು ತಾಲ್ಲೂಕಿನ ಪಾಳ್ಯ ಎಂಬ ಗ್ರಾಮದ ವಾಸಿ ಎಂದು ತಿಳಿದು ಬಂದಿರುತ್ತದೆ.

ನಂತರ ಚಾಸಾ-1 ರವರು ವಾಹನದ ಬಳಿ ಬಂದು ಪರಿಶೀಲಿಸಲಾಗಿ ವಾಹನದ ಒಳಗೆ

ಒಂದು ಕಪ್ಪು ಬಣ್ಣದ ಹೋರಿ ಮತ್ತು ಕಂದು ಬಣ್ಣದ ಒಂದು ಹಸು ಇರುವುದು ಕಂಡುಬಂದಿರುತ್ತದೆ. ನಂತರ ಚಾಸಾ-1 ರವರು ಆರೋಪಿಗಳಿಗೆ ಈ ರೀತಿಯಾಗಿ ಹಸುಗಳನ್ನು ತುಂಬಲು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಸದರಿಯವರು ಯಾವುದೇ ಪರವಾನಿಗೇ ಇಲ್ಲದಿರುವುದು ತಿಳಿದು ಬಂದಿರುತ್ತದೆ ಮತ್ತು ಸದರಿಯವರು ರಸ್ತೆಯ ಬಳಿ ಮಲಗಿರುವಂತಹ ಹಸುಗಳನ್ನು ಕಳ್ಳತನ ಮಾಡಿ ಹಾಸನದ ಸಂತೆಗೆ ಮಾರಾಟ ಮಾಡಲು ಬಂದಿರುತ್ತೇವೆ ಎಂದು ತಿಳಿಸಿರುತ್ತಾರೆ. ಅವುಗಳಲ್ಲಿ ಒಂದು ಕಪ್ಪು ಬಣ್ಣದ 2 ರಿಂದ 3 ವರ್ಷದ ಹೋರಿ ಮತ್ತು ಕಂದು ಬಣ್ಣದ 2 ರಿಂದ 3 ವರ್ಷದ ಹಸು, ಅಶೋಕ್ ಲೇಲೆಂಡ್ ಎಂಬ ವಾಹನದಲ್ಲಿ ತುಂಬಿರುತ್ತಾರೆ. ನಂತರ ಸದರಿ ವ್ಯಕ್ತಿಗಳು ಸದರಿ ಜಾನುವಾರಗಳಿಗೆ ಸರಿಯಾದ ರೀತಿಯಲ್ಲಿ ನೀರು ಮತ್ತು ಮೇವನ್ನು ನೀಡದಿರುವುದು ಕಂಡುಬಂದಿರುತ್ತದೆ. ನಂತರ ಚಾಸಾ-1 ರವರು ಮಹಜರ್ ಕ್ರಮವನ್ನು ಜರುಗಿಸಿ ಹಸುಗಳು, ಹಗ್ಗ ಮತ್ತು ವಾಹನವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಬೀದಿ ದೀಪದ ಸಹಾಯದಿಂದ ಮಹಜರ್ ಕ್ರಮವನ್ನು ರಾ.1.00 ರಿಂದ 2.00 ರ ಸಮಯದವರೆಗು ಬರೆಯಲಾಗಿರುತ್ತದೆ. ನಂತರ ಠಾಣೆಗೆ ಬಂದು ಹಾಜರಾಗಿ ಚಾಸಾ-17 ರವರಿಗೆ ವರದಿಯೊಟ್ಟಿಗೆ ಮಹಜರ್ ಪ್ರತಿ ಮತ್ತು ಅಮಾನತುಪಡಿಸಿಕೊಂಡಂತಹ ಹಸುಗಳು ಮತ್ತು ವಸ್ತುಗಳನ್ನು ಹಾಜರುಪಡಿಸಲಾಗಿರುತ್ತದೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-3 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ 11 ರವರೆಗೆ ಕಂಡುಬರುವ ವಾಹನ, ಜಾನುವಾರುಗಳು ಮತ್ತು ಹಗ್ಗವನ್ನು ನೋಡಿ ದಾಳಿಯ ಸಮಯದಲ್ಲಿ ವಶಪಡಿಸಿಕೊಂಡಂತಹ ವಸ್ತುಗಳು ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಕೆ.ಆರ್. ವಕೀಲರಿಂದ ಶ್ರೀ ಹೆಚ್.ಕೆ.ಡಿ. ವಕೀಲರ ಪರವಾಗಿಃ**

ನಿಪಿ-3 ರಲ್ಲಿ ಏನನ್ನು ಬರೆಯಲಾಗಿದೆ ಎಂಬುದರ ಸಂಪೂರ್ಣ ಮಾಹಿತಿ ನನಗಿರುತ್ತದೆ. ನಾನು ಆ ದಿನ ಬಾಳೂರಿನ ಹ್ಯಾಂಡ್ ಪೋಸ್ಟ್ ನ ಬಳಿ ಗಸ್ತು ಕಾರ್ಯಾಚರಣೆ ಮಾಡಿರುತ್ತೇನೆ. ಚಾಸಾ-1 ರವರು ನನಗೆ ಮಾಹಿತಿ ನೀಡಿದ ಸಮಯದಲ್ಲಿ ನಾನು ಬಾಳೂರಿನ ಹ್ಯಾಂಡ್ ಪೋಸ್ಟ್ ನ ಬಳಿ ಇರುತ್ತೇನೆ. ಚಾಸಾ-1 ರವರು ಮಾಹಿತಿಯನ್ನು ನೀಡಿದ ಮೇರೇಗೆ ನಾನು ಠಾಣೆಗೆ ಹಾಜರಾಗಿರುತ್ತೇನೆ. ನಾನು ಆ ಸಮಯದಲ್ಲಿ ಠಾಣೆಗೆ ಹೋಗಿದ್ದನ್ನು ಠಾಣೆಯ ಡೈರಿಯಲ್ಲಿ ನಮೂದಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಠಾಣೆಯ ಡೈರಿಯಲ್ಲಿ ಠಾಣೆಯ SHO ರವರು ಬರೆಯುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಠಾಣೆಯಿಂದ ಜಾವಳಿಗೆ 6 ಕೀ.ಮೀ. ಅಂತರವಿದೆ. ಇಲಾಖಾ ವಾಹನವದಲ್ಲಿ ನಮ್ಮ ಠಾಣೆಯಿಂದ ಜಾವಳಿಗೆ ಹೋಗಲು 20 ನಿಮಿಷಗಳಾಗುತ್ತದೆ. ಚಾಸಾ-2 ಮತ್ತು 3 ರವರು ಆ ದಿನ ಜಾವಳಿಯಿಂದ ಸ್ವಲ್ಪ ಹಿಂದೆ ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಜಾವಳಿ ಗ್ರಾಮವು ಹೇಮಾವತಿ ಸ್ಟ್ಯಾಚು ನಂತರದಲ್ಲಿ ಪ್ರಾರಂಭವಾಗುತ್ತದೆ ಎಂದರೆ ಸಾಕ್ಷಿಯು ಆ ದಿನ ಕತ್ತಲಾವರಿಸಿದ ಕಾರಣ ಸರಿಯಾಗಿ ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಕತ್ತಲು ಆವರಿಸಿದ ಕಾರಣ ಖಚಿತವಾಗಿ

ಚಾಸಾ-2 ಮತ್ತು 3 ರವರು ಯಾವ ಸ್ಥಳದಲ್ಲಿ ಸಿಕ್ಕಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ.

ಆ ದಿನ ರಾ.12.30 ರ ಸಮಯಕ್ಕೆ ಚಾಸಾ-2 ಮತ್ತು 3 ರವರು ಸಿಕ್ಕಿರುತ್ತಾರೆ. ಸಾಮಾನ್ಯವಾಗಿ ನಮ್ಮ ಪೋಲಿಸ್ ನಿಯಮದ ಪ್ರಕಾರ ರಾ.12.00 ರಿಂದ 12.30 ರ ಸಮಯದಲ್ಲಿ ಯಾವುದೇ ಅನಾಮದೇಯ ವ್ಯಕ್ತಿಯು ರಸ್ತೆಯಲ್ಲಿ ನಡೆದುಕೊಂಡು ಹೋದರೆ ಸದರಿ ವ್ಯಕ್ತಿಯ ಪೂರ್ವಭಾವದ ಬಗ್ಗೆ ವಿಚಾರಿಸುತ್ತೇವೆ ಎಂದರೆ ಸರಿ. ಚಾಸಾ-2 ಮತ್ತು 3 ರವರು ಸಿಕ್ಕಿದ ಸಮಯದಲ್ಲಿ ಚಾಸಾ-1 ರವರು ಅವರನ್ನು ವಿಚಾರಿಸಿರುತ್ತಾರೆ, ಸದರಿ ವ್ಯಕ್ತಿಗಳು ಜಾವಳಿ ಗ್ರಾಮದ ನಿವಾಸಿಗಳು ಎಂದು ತಿಳಿದು ಬಂದಿರುತ್ತದೆ. ನಂತರ 5 ರಿಂದ 10 ನಿಮಿಷದ ಅವಧಿಯಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಆ ದಿನ ಪಂಚರಿಗೆ ನೋಟೀಸನ್ನು ಜಾರಿ ಮಾಡಿರುತ್ತೇವೆ. ಪಂಚರು ಸಿಕ್ಕ ಸ್ಥಳದಿಂದ ಜಾವಳಿ ಗ್ರಾಮಕ್ಕೆ 1 ಕೀ.ಮೀ. ಅಂತರವಿರುತ್ತದೆ. ಆ ದಿನ ರಾತ್ರಿಯಾದ ಕಾರಣ ಸುತ್ತ ಮುತ್ತ ಇದ್ದ ಅಂಗಡಿ, ಬ್ಯಾಂಕ್ ಮತ್ತು ಇತರೆ ಕಟ್ಟಡಗಳ ಬಾಗಿಲನ್ನು ಮುಚ್ಚಲಾಗಿತ್ತು ಎಂದರೆ ಸರಿ. ಚಾಸಾ-2 ಮತ್ತು 3 ರವರನ್ನು ಹೊರತುಪಡಿಸಿ ಇತರೆ ಯಾವುದೇ ವ್ಯಕ್ತಿಗಳು ಆ ಸಮಯದಲ್ಲಿ ಓಡಾಡುತ್ತಿರುವುದು ಕಂಡುಬಂದಿರುವುದಿಲ್ಲ ಎಂದರೆ ಸರಿ. ಚಾಸಾ-2 ಮತ್ತು 3 ರವರು ಸಿಕ್ಕಿದ ಕಾರಣ ಇತರ ಸ್ಥಳೀಯ ವ್ಯಕ್ತಿಗಳನ್ನು ಪಂಚರಾಗಿ ಹಾಜರಾಗುವಂತೆ ಕೇಳಿಕೊಂಡಿರುವುದಿಲ್ಲ. ದಾಳಿ ನಡೆಸುವ ಪೂರ್ವದಲ್ಲಿ 50 ಮೀಟರ್ ಅಂತರದಿಂದ ಆರೋಪಿಗಳನ್ನು ಗಮನಿಸಲಾಗಿರುತ್ತದೆ.

ಆರೋಪಿಗಳು ಆ ದಿನ ವಾಹವನ್ನು ಬಾಳೂರಿನಿಂದ ಜಾವಳಿಗೆ ಹೋಗುವ ಮಾರ್ಗದ ಬಲಬದಿಯಲ್ಲಿ ನಿಲ್ಲಿಸಿರುತ್ತಾರೆ. ವಾಹವನ್ನು ಅಂಚೆ ಕಛೇರಿಯ ಕೆಳಬದಿ ರಸ್ತೆಯಲ್ಲಿ ನಿಲ್ಲಿಸಲಾಗಿತ್ತು. ಆ ದಿನ ವಾಹನದಲ್ಲಿ ಎರಡು ಜಾನುವಾರಗಳನ್ನು ತುಂಬಲಾಗಿತ್ತು ಮತ್ತು ಅವುಗಳನ್ನು ಹೊರತುಪಡಿಸಿ ರಸ್ತೆಯಲ್ಲಿದ್ದ ಜಾನುವಾರುಗಳು ಚಾಸಾ-4 ಮತ್ತು 5 ರವರಿಗೆ ಸೇರಿದ್ದಾಗಿರುತ್ತದೆ ಎಂದು ತಿಳಿದು ಬಂದಿರುತ್ತದೆ. ಸದರಿ ವಿಷಯವನ್ನು ಮಹಜರ್ ನಲ್ಲಿ ನಮೂದಿಸಿರುವುದಿಲ್ಲ. ವಾಹನದಲ್ಲಿ ಇದ್ದ ಜಾನುವಾರುಗಳನ್ನು ಹೊರತುಪಡಿಸಿ ಇತರ ಜಾನುವಾರುಗಳು ಎಷ್ಟು ದೂರದ ಅಂತರದಲ್ಲಿ ಇದ್ದವು ಎಂದು ಹೇಳಲಾಗುವುದಿಲ್ಲ ಮತ್ತು ಇತರೆ ಜಾನುವಾರುಗಳು ರಸ್ತೆಯ ಬದಿಯಲ್ಲಿ ಮಲಗಿರುವುದನ್ನು ಗಮನಿಸಿರುವುದಿಲ್ಲ. ಆರೋಪಿಗಳು ಜಾನುವಾರುಗಳನ್ನು ತುಂಬಿದ ವಾಹನದ ಸಂಖ್ಯೆ KA-13-C-9434 ಆಗಿತ್ತು. ಸಾಕ್ಷಿಯು ವಾಹನದ ಸಂಖ್ಯೆಯನ್ನು ತನ್ನ ಅಂಗೈಯಲ್ಲಿ ಬರೆದುಕೊಂಡು ಬಂದು ಉತ್ತರಿಸುತ್ತಿರುವುದಾಗಿ ಕಂಡುಬಂದಿರುತ್ತದೆ. ಆ ದಿನ ಆರೋಪಿಗಳು ಅಕ್ರಮವಾಗಿ ತುಂಬುತಿದ್ದಂತಹ ಜಾನುವಾರುಗಳು 2 ರಿಂದ 3 ವರ್ಷದ ಕಪ್ಪು ಬಣ್ಣದ ಹೋರಿ ಮತ್ತು ಒಂದು ಕಂದು ಬಣ್ಣದ ಹಸುವಾಗಿರುತ್ತದೆ. ಸದರಿ ಜಾನುವಾರುಗಳು ಸಂಪೂರ್ಣವಾಗಿ ಕಪ್ಪು ಮತ್ತು ಕಂದು ಬಣ್ಣದ ಜಾನುವಾರುಗಳಾಗಿರುತ್ತವೆ.

ದಾಳಿ ನಡೆಸಿದ ದಿನ ವಶಪಡಿಸಿಕೊಂಡ ಜಾನುವಾರು ಮತ್ತು ವಾಹನದೊಟ್ಟಿಗೆ ನಮ್ಮ ಮೇಲಾಧಿಕಾರಿಗಳಾಗಲೀ, ನಾವಾಗಲೀ ಪಂಚರನ್ನು ನಿಲ್ಲಿಸಿ ಫೋಟೋವನ್ನು ತೆಗೆಯಲಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಚಾಸಾ-1 ರವರನ್ನು ಹೊರತುಪಡಿಸಿ ಇತರೇ ಯಾವುದೇ ಸಿಬ್ಬಂದಿಗಳು ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ಆ ದಿನ ನಾನು ಫೋಟೋ ತೆಗೆದಿದ್ದು, ನನ್ನೊಟ್ಟಿಗೆ ಚಾಸಾ-7 ರವರು ಇರುತ್ತಾರೆ. ಆ ದಿನ ವಶಪಡಿಸಿಕೊಂಡಂತಹ ವಾಹನದ

ನಾಮಪಲಕ ಕಾಣುವಂತೆ ಫೋಟೋವನ್ನು ತೆಗೆಯಲಾಗಿದೆ ಎಂದರೆ ಸಾಕ್ಷಿಯು ಫೋಟೋವನ್ನು ತೆಗೆಯಲಾಗಿರುತ್ತದೆ. ಆದರೆ ವಾಹನದ ನಾಮಪಲಕದ ಬಗ್ಗೆ ಮಹಜರ್ ನಲ್ಲಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ವಶಪಡಿಸಿಕೊಂಡಂತಹ ಹಗ್ಗದ ಅಳತೆಯು ಈಗ ನೆನಪಾಗುತ್ತಿಲ್ಲ. ನಾವು ವಶಪಡಿಸಿಕೊಂಡಂತಹ ವಾಹನದ ಮಾಲೀಕತ್ವದ ಬಗ್ಗೆ ಚಾಸಾ-1 ರವರು ತನಿಖಾ ಸಮಯದಲ್ಲಿ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ. ಆ ದಿನ ಮಹಜರ್ ಪ್ರತಿಯನ್ನು ರಾ.1.00 ರಿಂದ 2.00-2.30 ರವರೆಗೂ ಬರೆಯಲಾಗಿದೆ. ಚಾಸಾ-1 ರವರು ನೀಡಿದ ಮಾಹಿತಿಯ ಮೇರೆಗೆ ನಿಪಿ-3 ನ್ನು ನಾನೇ ಬರೆಯಲಾಗಿರುತ್ತದೆ. ನಿಪಿ-3 ರಲ್ಲಿ ಯಾವ ದಿನ ಮತ್ತು ಎಷ್ಟು ಗಂಟೆಯಿಂದ ಮಹಜರ್ ನ್ನು ಬೆರೆಯಲಾಗಿದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಗೋವುಗಳನ್ನು ಅಕ್ರಮವಾಗಿ ತುಂಬಿದ್ದ ವಾಹನದ ಒಳಭಾಗದ ಫೋಟೋವನ್ನು ತೆಗೆಯಲಾಗಿರುತ್ತದೆ. ಆ ದಿನ ನನ್ನ ಮೊಬೈಲ್ ಸಹಾಯದಿಂದ ನಾನೇ ಫೋಟೋವನ್ನು ತೆಗೆದಿರುತ್ತೇನೆ. ಸದರಿ ವಿಷಯವನ್ನು ನಿಪಿ-3 ರಲ್ಲಿ ನಮೂದಿಸಲಾಗಿರುತ್ತದೆ. ಪಂಚನಾಮೆ ಮಾಡಲಾದ ಸ್ಥಳದ ಚೆಕ್ಕುಬಂದಿಯು ಪೂರ್ವಕ್ಕೆ ಬಾಳೂರಿಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಜಾವಳಿ ಗ್ರಾಮಕ್ಕೆ ರಸ್ತೆ, ಉತ್ತರಕ್ಕೆ ಅಂಚೆ ಕಛೇರಿ ಮತ್ತು ದಕ್ಷಿಣಕ್ಕೆ ಬ್ಯಾಂಕ್ ಇರುತ್ತದೆ. ವಾಹನಕ್ಕೆ ಹಸುವನ್ನು ತುಂಬಲು ಆರೋಪಿಗಳು ಸಲಕರಣೆಗಳನ್ನು ಇಟ್ಟುಕೊಂಡಿರುವುದು ಕಂಡುಬಂದಿರುವುದಿಲ್ಲ. ಎಂ.ಒ.1 ರಿಂದ 3 ವಸ್ತುಗಳು ಹಸುಗಳ ಪಕ್ಕದಲ್ಲಿಯೇ ಇದ್ದವು. ಆರೋಪಿಗಳು ಅಕ್ರಮವಾಗಿ ತುಂಬುತ್ತಿದ್ದ ಜಾನುವಾರುಗಳನ್ನು ಒಂದರಿಂದ ಎರಡು ವ್ಯಕ್ತಿಗಳು ಎತ್ತಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾಹನವನ್ನು ಕಪ್ಪು ಟಾರ್ಪಲ್ ನಿಂದ ಮುಚ್ಚಲಾಗಿತ್ತು. ಸದರಿ ಕಪ್ಪು ಟಾರ್ಪಲ್ ಕಾಮನ್ ಆಗಿ ಕಟ್ಟಲಾಗಿತ್ತು, ಸದರಿ ಟಾರ್ಪಲ್ ನ್ನು ವಶಪಡಿಸಲಾಗಿರುವುದಿಲ್ಲ. ನಾನು ಮಹಜರ್ ಸಮಯದಲ್ಲಿ ಯಾವ ಕಂಪನಿಯ ಮೊಬೈಲ್ ನಿಂದ ಫೋಟೋವನ್ನು ತೆಗೆದಿರುತ್ತೇನೆ ಎಂದು ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ಮೊಬೈಲ್ ನಿಂದ ಫೋಟೋವನ್ನು ತೆಗೆದರೆ ದಿನಾಂಕ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ಮೊಬೈಲ್ ಗೆ ಅಳವಡಿಕೆ ಮಾಡಿದ್ದಲ್ಲಿ ನಮೂದಾಗುತ್ತದೆ ಎಂದು ನುಡಿಯುತ್ತಾರೆ.

ನಾನು ಆ ದಿನ ನನ್ನ ಮೊಬೈಲ್ ನಿಂದ ಫೋಟೋವನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಿಂದ 11 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರನ್ನು ಪ್ರಕರಣಕ್ಕಾಗಿ ಪಂಚರನ್ನಾಗಿ ನಾವೇ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-3 ನ್ನು ಠಾಣೆಯಲ್ಲಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಎಂ.ಒ.1 ರಿಂದ 3 ರಂತಹ ವಸ್ತುಗಳನ್ನು ಮತ್ತು ಯಾವುದೇ ವಾಹನಗಳನ್ನು ಘಟನಾ ಸ್ಥಳದಿಂದ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ವಶಪಡಿಸಿಕೊಂಡ ಗೋವುಗಳು ಜಾವಳಿ ಗ್ರಾಮದ ಗೋವುಗಳಾಗಿದ್ದರೆ ಅದರ ಮಾಲೀಕರ ಅರ್ಜಿ ಸಲ್ಲಿಸುತ್ತಿದ್ದರು ಎಂದರೆ ಸಾಕ್ಷಿಯು ಅವುಗಳು ಬಿಡಾಡಿ ಗೋವುಗಳು ಎಂದು ನುಡಿಯುತ್ತಾರೆ. ನಿಪಿ-3 ಕ್ಕೆ ನಾನು, ಪಂಚರು ಮತ್ತು ಚಾಸಾ-1 ಮತ್ತು ಚಾಸಾ-8 ರವರು ಸಹಿ ಮಾಡಿರುತ್ತೇವೆ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.